| | | |
|---|---|---|
| 23. | ಗುಲ್ಬರ್ಗಾ ಜಿಲ್ಲೆ | ಬಾಕಿ ಉಳಿದಿಲ್ಲ |
| 24. | ಬೆಂಗಳೂರು ನಗರ ಜಿಲ್ಲೆ | |
| | 1. ಬೆಂಗಳೂರು ಉತ್ತರ | 2 |
| | 2. ಬೆಂಗಳೂರು ಉತ್ತರ (ಅಪರ0 | 16 |
| | 3. ಬೆಂಗಳೂರು ದಕ್ಷಿಣ | 33 |
| | 4. ಬೆಂಗಳೂರು ಪೂರ್ವ | 52 |
| | 5. ಆನೇಕಲ್ | – |
| 25. | ದಾವಣಗೆರೆ ಜಿಲ್ಲೆ | |
| | 1. ದಾವಣಗೆರೆ | 55 |
| | 2. ಹರಿಹರ | – |
| | 3. ಚನ್ನಗಿರಿ | 23 |
| | 4. ಹೊನ್ನಾಳಿ | 18 |
| | 5. ಹರಪನಹಳ್ಳಿ | 52 |
| | 6. ಜಗಳೂರು | 29 |
| 26. | ಚಿಕ್ಕಮಗಳೂರು ಜಿಲ್ಲೆ | |
| | 1. ಚಿಕ್ಕಮಗಳೂರು | 15 |
| | 2. ಮೂಡಗೆರೆ | 3 |
| | 3. ಕೊಪ್ಪ | 3 |
| | 4. ಶೃಂಗೇರಿ | – |
| | 5. ನರಸಿಂಹರಾಜಪುರ | – |
| | 6. ತರೀಕೆರೆ | 20 |
| | 7. ಕಡೂರು | 35 |
| 27. | ಚಾಮರಾಜನಗರ ಜಿಲ್ಲೆ | |
| | 1. ಚಾಮರಾಜನಗರ | 225 |
| | 2. ಕೊಳ್ಳೇಗಾಲ | 61 |
| | 3. ಗುಂಡ್ಲಪೇಟೆ | 4 |
| | 4. ಯಳಂದೂರು | 2 |

486 (1102) ಶ್ರೀ ಶ್ರೀನಿವಾಸ್ ಎಂ. (ಮಂಡ್ಯ) : ಮಾನ್ಯ ಸಕ್ಕರೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಮೈಸೂರು ಸಕ್ಕರೆ ಕಂಪನಿ, ಮಂಡ್ಯ ಇದರಲ್ಲಿ ರಘು ಮತ್ತು ಮುಕ್ತ ಮಾರುಕಟ್ಟೆಯಲ್ಲಿ ಸಕ್ಕರೆಯನ್ನು ಮಾರಾಟ ಮಾಡಲು ಅನುಸರಿಸುವ ಟೆಂಡರ್ ನಿಯಮಗಳೇನು?

ಆ) ಟೆಂಡರ್‌ಗಳನ್ನು ತಿರಸ್ಕೃತಗೊಳಿಸಲು ಅನುಸರಿಸಲಾಗುವ ಮಾನದಂಡ ಏನು;

ಇ) 2002ರ ಅಕ್ಟೋಬರ್, ನವೆಂಬರ್ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ ಭಾರತ ಸರ್ಕಾರವು ಮುಕ್ತ ಮಾರುಕಟ್ಟೆಯಲ್ಲಿ ಸಕ್ಕರೆಯನ್ನು ಮಾರಲು ನೀಡಲಾಗಿದ್ದ ಅನುಮತಿ ಪ್ರಮಾಣ ಎಷ್ಟು,

ಈ) ಮಾರಾಟದ ನಷ್ಟದ ಮೊತ್ತ ಎಷ್ಟು,

ಉ) 2002–03ರ ಸಾಲಿನಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯವು ಸಕ್ಕರೆಯನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರಲು ಅನುಮತಿ ನೀಡಿರುವ ಪ್ರಮಾಣ ಎಷ್ಟು, ನಿರ್ದೇಶಕ ಮಂಡಳಿಯ ಷರತ್ತನ್ನು ಉಲ್ಲಂಘಿಸಲಾಗಿದೆಯೇ, ಇದಕ್ಕೆ ಕಾರಣಕರ್ತರು ಯಾರು;

ಊ) 2003–04 ಸಾಲಿನಲ್ಲಿ ಸಕ್ಕರೆಯನ್ನು ರಫ್ತು ಮಾಡಲು ಯಾವ ಯಾವ ದರದಲ್ಲಿ ಒಪ್ಪಲಾಗಿದೆ.

ಶ್ರೀ ಅವರೇಗೌಡ ಎಲ್. ಬೈಯ್ಯಾಪುರ (ಸಕ್ಕರೆ ಸಚಿವರು) :

ಅ) ಮೈಸೂರು ಸಕ್ಕರೆ ಕಂಪನಿ, ಮಂಡ್ಯ ಇದರಲ್ಲಿ ಉತ್ಪಾದಿಸುವ ಸಕ್ಕರೆಯನ್ನು ರಫ್ತು ಮತ್ತು ಮುಕ್ತ ಮಾರುಕಟ್ಟೆಯಲ್ಲಿ ಸಕ್ಕರೆಯನ್ನು ಮಾರಾಟ ಮಾಡುವಾಗ ಈ ಕೆಳಕಂಡ ಕ್ರಮಗಳನ್ನು ಅನುಸರಿಸಲಾಗುತ್ತಿದೆ.

**ಅ) ರಫ್ತು ಮಾಡುವಾಗ ಅನುಸರಿಸುವ ಕ್ರಮಗಳು:**

1. ಪತ್ರಿಕೆಗಳಲ್ಲಿ ಜಾಹಿರಾತನ್ನು ನೀಡಲಾಗುವುದು
2. ಟೆಂಡರ್ ದಾರರಿಂದ ಹಣವನ್ನು ಪಡೆದು ಟೆಂಡರ್ ಫಾರಂಗಳನ್ನು ವಿತರಿಸಲಾಗುವುದು.
3. ಎ.ಎಂ.ಡಿ.ಹಣವನ್ನು ಲಗತ್ತಿಸಿದ ಕ್ವಟೇಷನ್‌ಗಳನ್ನು ಸ್ವೀಕರಿಸಿ, ನಂತರ ಅವುಗಳನ್ನು ಸಕ್ಕರೆ ದಲ್ಲಾಳಿಗಳ ಸಮ್ಮುಖದಲ್ಲಿ ತೆರೆದು ದರಗಳನ್ನು ಓದಿ ತಿಳಿಸಲಾಗುವುದು ಮತ್ತು ದಾಖಲಿಸಲಾಗುವುದು.

**ಆ) ಮುಕ್ತ ಮಾರುಕಟ್ಟೆಯಲ್ಲಿ ಸಕ್ಕರೆಯನ್ನು ಮಾರಾಟ ಮಾಡುವಾಗ ಅನುಸರಿಸುವ ಕ್ರಮಗಳು:**

1. ಸಕ್ಕರೆ ಕಂಪನಿಗಳಿಂದ ಮುಕ್ತ ಮಾರಾಟ ಸಕ್ಕರೆಯನ್ನು ಎತ್ತುವಳಿ ಮಾಡುವ ಬಗ್ಗೆ ಸರ್ಕಾರದಿಂದ ಪರವಾನಿಗಿಯನ್ನು ಹೊಂದಿರುವ (ಮೆಂಬರ್ ಷಿಪ್) ಸಕ್ಕರೆ ವ್ಯಾಪಾರಿಗಳಿಗೆ ಟೆಂಡರಿನಲ್ಲಿ ಭಾಗವಹಿಸಲು ಅನುಮತಿಯನ್ನು ನೀಡಲಾಗುವುದು.
2. ಲೈಸನ್ಸ್ ಹೊಂದಿರುವ ವ್ಯಾಪಾರಿಗಳಿಂದ ಇ.ಎಂ.ಡಿ ಹಣವನ್ನು ಬ್ಯಾಂಕ್ ಚೆಕ್ ಮುಖಾಂತರ ಪಡೆದು ನಂತರ ಅವರಿಗೆ ಟೆಂಡರಿನಲ್ಲಿ ಭಾಗವಹಿಸಲು ಅನುಮತಿಯನ್ನು ನೀಡಲಾಗುವುದು.

3. ಸಕ್ಕರೆ ದಲ್ಲಾಳಿಗಳಿಗೆ ಟೆಂಡರ್ ಫಾರಂನ್ನು ವಿತರಿಸಿ, ನಂತರ ಅವರು ದರವನ್ನು ನಮೂದಿಸಿ ಭರ್ತಿ ಮಾಡಿದ ಟೆಂಡರ್ ಫಾರಂಗಳ ಲಕೋಟೆಗಳನ್ನು ವ್ಯವಸ್ಥಾಪಕ ನಿರ್ದೇಶಕರ ಹಾಗೂ ವ್ಯಾಪಾರಿಗಳ ಸಮ್ಮುಖದಲ್ಲಿ ತೆರೆದು, ಅವರು ನಮೂದಿಸಿರುವ ದರಗಳನ್ನು ಓದಿ ತಿಳಿಸಲಾಗುವುದು ಮತ್ತು ದಾಖಲಿಸಲಾಗುವುದು.

4. ಮುಕ್ತ ಮಾರುಕಟ್ಟೆಯ ಸಕ್ಕರೆ ದರವನ್ನು ಪರಿಶೀಲಿಸಿ ಹೆಚ್ಚಿನ ದರವನ್ನು ನಮೂದಿಸಿದವರಿಗೆ ವ್ಯವಸ್ಥಾಪಕ ನಿರ್ದೇಶಕರ ಆದೇಶದ ಮೇರೆಗೆ ಸಕ್ಕರೆಯನ್ನು ಹಂಚಿದೆ ಮಾಡಲಾಗುವುದು.

5. ಅವರು ಖರೀದಿಸುವ ಪ್ರಮಾಣವಷ್ಟು ಸಕ್ಕರೆಯನ್ನು ನಿಗಧಿತ ದಿನಾಂಕದೊಳಗೆ ಪೂರ್ಣ ಪ್ರಮಾಣವನ್ನು ಎತ್ತುವಳಿ ಮಾಡದಿದ್ದ ಪಕ್ಷದಲ್ಲಿ ಅದರಿಂದ ಆಗುವ ನಷ್ಟದ ಮೊತ್ತವನ್ನು ಅವರಿಂದ ಪಡೆದಿರುವ ಬ್ಯಾಂಕ್ ಚೆಕ್‌ನಲ್ಲಿ ನಮೂದಿಸಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

ಆ) 1. ಗೊತ್ತುಪಡಿಸಿದ ಇ.ಎಂ.ಡಿ ಹಣವನ್ನು ಲಗತ್ತಿಸದಿದ್ದಲ್ಲಿ ಅಂತಹ ಸಕ್ಕರೆ ವ್ಯಾಪಾರಿಗಳಿಗೆ ರಫ್ತು ಸಕ್ಕರೆ ಮಾರಾಟ ಮಾಡುವ ಟೆಂಡರಿನಲ್ಲಿ ಭಾಗವಹಿಸಲು ಅವಕಾಶವನ್ನು ನೀಡುವುದಿಲ್ಲ.

2. ಸಕ್ಕರೆ ಕಂಪನಿಗಳಿಂದ ಮುಕ್ತ ಸಕ್ಕರೆಯನ್ನು ಎತ್ತುವಳಿ ಮಾಡುವ ಬಗ್ಗೆ ಸರ್ಕಾರದಿಂದ ಪರವಾನಿಗೆಯನ್ನು ಹೊಂದಿರುವ (ಮೆಂಬರ್ ಷಿಪ್) ಸಕ್ಕರೆ ವ್ಯಾಪಾರಿಗಳಿಗೆ ಮಾತ್ರ ಟೆಂಡರಿನಲ್ಲಿ ಭಾಗವಹಿಸಲು ಅನುಮತಿಯನ್ನು ನೀಡಲಾಗುವುದು.

ಇ) 2002ನೇ ಅಕ್ಟೋಬರ್, ನವೆಂಬರ್ ಮತ್ತು ಡಿಸೆಂಬರ್ ತಿಂಗಳಿನಲ್ಲಿ ಕೇಂದ್ರ ಸರ್ಕಾರವು ಮುಕ್ತ ಮಾರುಕಟ್ಟೆಯಲ್ಲಿ ಸಕ್ಕರೆಯನ್ನು ಮಾರಾಟ ಮಾಡಲು ನಿಗಧಿ ಪಡಿಸಿದ ಪ್ರಮಾಣ ಈ ಕೆಳಗಿನಂತಿದೆ

| | | | |
|---|---|---|---|
| ಅಕ್ಟೋಬರ್ | 2002 | : | 50552 ಕ್ವಿಂಟಲ್ |
| ನವೆಂಬರ್ | 2002 | : | 49552 ಕ್ವಿಂಟಲ್ |
| ಡಿಸೆಂಬರ್ | 2002 | : | 56922 ಕ್ವಿಂಟಲ್ |

ಈ) 1.28 ಕೋಟಿ ರೂ.ಗಳಷ್ಟು

ಉ) 2,50,000 ಕ್ವಿಂಟಾಲ್

ನಿರ್ದೇಶಕರು ಮಂಡಳಿಯು ಷರತ್ತನ್ನು ಉಲ್ಲಂಘಿಸಿಲ್ಲ.

ಊ) 2003–04ರ ಸಾಲಿನ ಸಕ್ಕರೆಯನ್ನು ಪ್ರತಿ ಮೆಟ್ರಿಕ್ ಟನ್‌ಗೆ ರೂ.9590/ ರೂ.9630 ಮತ್ತು 9000/– ರಂತೆ ರಫ್ತು ಮಾಡಲಾಗಿದೆ.